ರೊಚ್ಚಿಗೆದ್ದು ನಾನೂ ಜೋಕುಗಳನ್ನು ಸಿಡಿಸಲು ಯತ್ನಿಸಿದ್ದೇನೆ. ಅದು ಹಾಸ್ಯಾಸ್ಪದಗೊಂಡಿದೆ. ಇಷ್ಟಂತೂ ನಿಜ. ಉಲ್ಲಾಸದ ಮೂಡಲ್ಲಿರುವ ಸಭೆಗಳು ನನ್ನ ಭಾಷಣದ ಬಳಿಕ ಶ್ರದ್ಧಾಂಜಲಿ ಸಭೆಯ ಹಾಗೆ ಸ್ತಬ್ಧಗೊಂಡಿದೆ. ಜನರ ಗಾಢಮೌನ, ಬಿಸುಪಿಲ್ಲದ ಹಸ್ತಲಾಘವ, ಕಣ್ಣುತಪ್ಪಿಸುವಾಟ, ದೂರಸರಿತಗಳು ಭಾಷಣದ ಫಲಿತಾಂಶವನ್ನು ಕೂಗಿಕೂಗಿ ಸಾರುತ್ತಿರುತ್ತವೆ. ಜನರಾದರೂ ಬಾಯಿಸತ್ತವರು. 'ಪಾಪ, ದೂರದಿಂದ ಬಂದಿದ್ದಾನೆ. ಇವತ್ತಿನ ಎಳಸು ನಾಳೆ ಬಲಿತೀತು. ನಾಕು ಮಾತಾಡಿಕೊಂಡು ಹೋಗಲಿ' ಎಂದು ಮರುಕದೋರುತ್ತಾರೆ. ಮರುಕದ ಮುಳ್ಳಿನಷ್ಟು ಚೂಪಾಗಿ ಚುಚ್ಚುವ ಮೊನೆ ಮತ್ತೊಂದಿದೆಯೇ? ನನ್ನ ಭಾಷಣದ ಪ್ರಭಾವ ಅಳೆಯಲು ಮೇಲೆಬಿದ್ದು ಜನರನ್ನು ನಾನೇ ಮಾತಿಗೆಳೆಯುತ್ತೇನೆ. ಆಗ ಒಣನಗೆಯನ್ನು ತುಟಿಯ ಮೇಲೆಳೆದುಕೊಂಡು ಭಾಷಣವೊಂದನ್ನು ಬಿಟ್ಟು ಲೋಕದ ಸುದ್ದಿಯನ್ನೆಲ್ಲ ಚರ್ಚಿಸುತ್ತಾರೆ. ಅದು ನನ್ನ ಗುನ್ಹೆಯ ಮೇಲೆ ಎಳೆಯುತ್ತಿರುವ ಪರದೆ. ಅಪ್ರಿಯ ಸತ್ಯ ಹೇಳುವ ದಿಟ್ಟತನ ತೋರುವವರು ಕೆಲವರಾದರೂ ಉಂಟು. ವಿಷಣ್ಣತೆಯಿಂದ ಏಕಾಂಗಿಯಾಗಿ ಊಟ ಮಾಡುತ್ತ ನಿಂತ ನನ್ನತ್ತ ಅವರು ಮೆಲ್ಲನೆ ಸರಿದು, 'ಯಾಕಿಂಗ್ ಮಾಡಿದಿರಿ ಸಾಹೇಬರ? ಭಾಳ ಎಕ್ಸ್‌ಪೆಕ್ಟ್ ಮಾಡಿದ್ದಿವಿ. ಡಿಸಪಾಯಿಂಟ್ ಆತು ಬಿಡ್ರಿ' ಎನ್ನುವರು. ನನ್ನ ತಾಕತ್ತೇ ಅಷ್ಟೆಂದು ಅವರಿಗಾದರೂ ಹೇಗೆ ಮನದಟ್ಟು ಮಾಡಲಿ? ಮನೆಯಲ್ಲಿದ್ದ ಕೆಲಸ ಬೊಗಸೆ ಬಿಟ್ಟು ಬಂದಿದ್ದೆ. ಭಾಷಣ ಕೊಂಚ ಶುಷ್ಕವಾಗಿರಬಹುದು. ಅದಕ್ಕಿಷ್ಟು ದೊಡ್ಡ ಶಿಕ್ಷೆಯೇ? ಕೃತಜ್ಞತೆಯಿಲ್ಲದ ಜನ. ಇಂಥವರೆದುರು ಭಾಷಣ ಮಾಡದಿದ್ದರೆ ಲೋಕವೇನು ಮುಳುಗುತ್ತಿತ್ತೆ? ಎಷ್ಟೊ ದೊಡ್ಡ ಲೇಖಕರೇ ಚತುರ ಮಾತುಗಾರರಲ್ಲವಂತೆ. ನಾನ್ಯಾವ ಗಿಡದ ತೊಪ್ಪಲು ಎಂದೆಲ್ಲ ಸಂತೈಸಿಕೊಳ್ಳುತ್ತೇನೆ. ಆದರೂ ಪರಿತಾಪದ ಗಾಣ ಹಾಕಿಕೊಂಡು ನುರಿಯುತ್ತದೆ.

ದೂರದ ಊರಿನವರು ಒಲ್ಲದ ವಿಷಯದ ಮೇಲೆ ಭಾಷಣಕ್ಕೆ ಕರೆದಾಗ, ನಿರಾಕರಿಸಲು ನನ್ನಲ್ಲಿ ಸಬೂಬುಗಳ ದೊಡ್ಡ ಪಟ್ಟಿಯೇ ಇದೆ—ಅಜ್ಜಿಸಾವು, ಹೊರರಾಜ್ಯದ ಪ್ರವಾಸ, ಅಪರೂಪದ ನೆಂಟರಾಗಮನ, ಮಹತ್ವದ ಗ್ರಂಥರಚನೆಯಲ್ಲಿ ಮುಳುಗಿರುವುದು, ಹೆಂಡತಿಗೆ ಸಖತ್ ಕಾಯಿಲೆ ಇತ್ಯಾದಿ. ಇವೂ ನಡುನೀರಲ್ಲಿ ಮುಳುಗಿಸುತ್ತವೆ. ಸುಳ್ಳುಪತ್ತೆಯಲ್ಲಿ ಪಳಗಿದ ಕೆಲವರು ನಾನಿಲ್ಲದಾಗ ಕರೆಮಾಡಿ, 'ನಮಸ್ಕಾರ್ರೀ ಅಕ್ಕಾರ, ಸರ್ ಸಾಧನೆಯ ಹಿಂದಿನ ಶಕ್ತಿಯಿದ್ದಂಗ ನೀವು. ನಿಮಗ ಆರಾಮಿಲ್ಲ ಅಂತ ಗೊತ್ತಾತು. ಹ್ಯಾಂಗದ ಈಗ?' ಎಂದು ಕೇಳಿ, ಅದಕ್ಕಾಕೆ, 'ನನಗೇನಾದೇರಿ? ಗುಂಡುಕಲ್ಲಂಗೆ ಇದೀನಿ. ಯಾರದು ಬೇಕೂಫ ಸುಳ್ಳುಸುದ್ದಿ ಹಬ್ಬಿಸಿದವನು? ನಾನು ಯಾರ ಸಾಧನೆಯ ಹಿಂದೂ ಇಲ್ಲ ಮುಂದೂ ಇಲ್ಲ. ಸ್ವತಂತ್ರ ಇದ್ದೇನೆ. ಇನ್ನೊಮ್ಮೆ ಹಿಂಗೆ ಹೊಗಳಬ್ಯಾಡರಿ. ಖಬರದಾರ್' ಎಂಬ ಉತ್ತರ ಕೊಟ್ಟಿದ್ದನ್ನು ಕಿವಿಯಾರೆ ಕೇಳಿಸಿಕೊಂಡಿದ್ದೇನೆ. ಕೆಲವು ಮಳ್ಳಿಗಳು 'ತಾವು ರಚಿಸುತ್ತಿದ್ದ ಮಹತ್ವದ ಗ್ರಂಥ ಎಲ್ಲಿಗೆ ಬಂತೊ?' ಎಂದು ಚಿವುಟುವುದುಂಟು. ಒಬ್ಬರಂತೂ ಪತ್ರದಲ್ಲಿ ಇಂತೀ ನಮಸ್ಕಾರಗಳಾದ ಬಳಿಕ ತುದಿಯಂಚಿನಲ್ಲಿ 'ಮರೆತಮಾತು: ನಿಮ್ಮ ಅಜ್ಜಿ ಹೋದವರ್ಷವೇ ತೀರಿಕೊಂಡಿರುವುದರಿಂದ ಈ ಸಲ ನಮ್ಮಲ್ಲಿ ಬರೋಕೆ ಅಡ್ಡಿಯಾಗದು ಎಂದು ನಂಬಿದ್ದೇವೆ' ಎಂದು ಶರಾ ಸೇರಿಸಿದ್ದರು. ಇಂತಹ ವ್ಯಂಗ್ಯಕ್ಕೆಲ್ಲ ಸೊಪ್ಪುಹಾಕದೆ ಭಾಷಣದ ಮಾರುಕಟ್ಟೆಯಲ್ಲಿ ನನಗಿರುವ ಬೇಡಿಕೆಗೆ ಒಳಗೇ ಹಿಗ್ಗುತ್ತ, ಬದಲಿ ಭಾಷಣಕಾರರನ್ನು ಸೂಚಿಸುವುದುಂಟು. 'ಅವರ ಡೇಟ್ ಸಿಗಲಿಲ್ಲ ಸಾ... ಕಣ್ಣಿನ ಆಪರೇಶನ್ ಆಗಿದೆಯಂತೆ. ಅದಕ್ಕೇ ಅಲ್ಲವಾ...' ಎಂದು ಘೋರಸತ್ಯವನ್ನು ತಣ್ಣಗೆ